ಶ್ರೀ ಕೋಣಂದೂರು ಲಿಂಗಪ್ಪ.—ಬಂದಿದೆ. ಆದರೆ ಸ್ವಲ್ಪ ವಿಷಯ ಹೇಳಬೇಕಾಗಿದೆ. ಎಕ್ಸ್‌ರೇ ಪ್ಲಾಂಟನ್ನು ಒಂದೂವರೆ ವರ್ಷದಿಂದ ಕೇಳಿದರೂ ಕೊಟ್ಟಿಲ್ಲ ಜನರು ೪೦-೫೦ ಮೈಲಿ ದೂರವಿರುವ ಶಿವಮೊಗ್ಗಕ್ಕೆ ಹೋಗಿ ಎಕ್ಸ್‌ರೇ ತೆಗೆಸಬೇಕಾಗಿದೆ ಹೆಲ್ತ್ ಮಿನಿಸ್ಟರು ಕೊಡುತ್ತೇವೆಂದು ಬೆಳಿಗ್ಗೆ ಹೇಳಿದ್ದಾರೆ, ಮತ್ತೊಮ್ಮೆ ಭರವಸೆ ಕೊಟ್ಟಿದ್ದಾರೆ, ನೋಡೋಣ

ಮತ್ತೊಂದು ವಿಷಯ ಇಂದಿರಾ ಬಿಗ್ರೇಡಿನ ಬಗ್ಗೆ ನಿನ್ನೆ ನಿಲುವಳಿ ಸೂಚನೆ ಕಳಿಸಿದ್ದೆ. ಆದರೆ ಸ್ಪೆಸಿಫಿಕ್ ಛಾರ್ಜಸ್ ಇಲ್ಲವೆಂದು ಅದನ್ನು ತಳ್ಳಿ ಹಾಕಿದ್ದೀರಿ. ಆದರೆ ಈ ದಿವಸ....

ಅಧ್ಯಕ್ಷರು.—ನಿರ್ದಿಷ್ಟವಾಗಿ ಹೀಗಾಗಿದೆ ಎಂದು ತಿಳಿಸಿದರೆ ಆ ವಿಷಯವನ್ನು ಕಾಲ್ ಅಟೆನ್‌ಷನ್ ನೋಟಿಸ್ ಆಗಿ ಪರಿವರ್ತನೆ ಮಾಡಬಹುದು

ಶ್ರೀ ಹೆಚ್. ಡಿ. ದೇವೇಗೌಡ.—ದಯಮಾಡಿ ಅವಕಾಶ ಕೊಟ್ಟರೆ ಒಂದು ಮಾತನ್ನು ಹೇಳುತ್ತೇನೆ ಇಂದಿರಾ ಬ್ರಿಗೇಡಿನ ಬಗ್ಗೆ ಜನರಲೈಜ್ ಮಾಡಿಕಳಿಸಿದ್ದಾರೆ, ಆದುದರಿಂದ ಅದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕಾಗಿಲ್ಲ ಎಂದು ತಿಳಿಸಿದ್ದೀರಿ. ಆದರ ಬಗ್ಗೆ ವಾದವಿವಾದವಿಲ್ಲ. ತವಂಗೆ ಗೊತ್ತಿದೆ, ಸುಮಾರು ಒಂದು ವಾರದ ಹಿಂದೆ ಬೆಂಗಳೂರು ಯುನಿವರ್ಸಿಟಿಯಲ್ಲಿ ನಡೆಯುತ್ತಿರುವ ಅವ್ಯವಹಾರ, ಅತ್ಯಾಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಪ್ರಯತ್ನಪಟ್ಟು ಕಾಲ್ ಅಟೆನೆಷನ್ ಕಳಿಸಿದ್ದೆ. ಅಪ್ಪರ ಹೌಸಿನಲ್ಲಿ ನಿನ್ನೆ ಈ ವಿಷಯ ಚರ್ಚೆಯಾಗಿದೆ. ಆ ವಿಷಯವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಗಮನಕ್ಕೆ ತರಲು ಸದ್ಯಕ್ಕೆ ನಾವು ಇಚ್ಛೆ ಪಡುವುದಿಲ್ಲ. ಸರ್ಕಾರದಿಂದ ಕಾಲ್‌ಅಟೆನ್‌ಷನ್ನಿಗೇನು ಉತ್ತರ ಬರುತ್ತದೆಂಬುದನ್ನು ನಾವು ನೋಡಿಕೊಂಡು ಮುಂದೇನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಂದಿರಾ ಬ್ರಿಗೇಡಿನ ಹೆಸರು ಹೇಳಿದರೆ ಬಹಳ ಗಲಾಟೆ ಮಾಡುವರು, ಮೇಲೆ ಬೀಳುವರು.

ಶ್ರೀ ಎಸ್. ಎಂ. ಕೃಷ್ಣ.—ಲಿಂಗಪ್ಪನವರು ಹಾಗೆ ಹೇಳುವುದು ಸರಿಯಲ್ಲ, ಒಳ್ಳೆಯ ಭಾಷೆಯನ್ನು ಉಪಯೋಗಿಸತಕ್ಕ ಚಾಕಚಕ್ಯತೆ, ಶಕ್ತಿ ಅವರಿಗಿದೆ.

Realease of extra waters to Tamil Nadu

†ಶ್ರೀ ಕೆ. ಹೆಚ್, ಹನುಮೇಗೌಡ.—(ಹಾಸನ) ಕಳೆದ ಮೂರು ದಿನಗಳಿಂದ ಕೆ.ಆರ್. ಸಾಗರ ಡ್ಯಾಂ ನಿಂದ ನಿಯಮದ ಪ್ರಕಾರ ನೀರು ಬಿಡದೆ ಯಥೇಚ್ಛವಾಗಿ ಬಿಡುತ್ತಿದ್ದಾರೆ. ಮದ್ದಾಸ್ರಿಗೆ ಹೀಗೆ ನಿಯಮಕ್ಕಿಂತ ಹೆಚ್ಚಿಗೆ ನೀರು ಬಿಡುವುದು ಸರಿಯಲ್ಲ, ಕಳೆದ ವರ್ಷ ವಿಶ್ವೇಶ್ವರಯ್ಯ ನಾಲೆ ಕೆಳಗೆ ಸರಿಯಾಗಿ ನೀರು ಬಿಡದೆ ರೈತರಿಗೆ ತೊಂದರೆಯಾಗಿ ಹೋರಾಟಮಾಡಿರುವಾಗ ಯಾವುದೇ ಒಂದು ಉದ್ದೇಶದಿಂದ ಮದ್ರಾಸಿಗೆ ೩ ದಿವಸಗಳಿಂದ ಹೆಚ್ಚಿಗೆ ನೀರನ್ನು ಬಿಟ್ಟು ನಮ್ಮ ದೇಶದ ರೈತರ ಹಿತವನ್ನು ಕಡೆಗಾಣಿಸಿರುವುದು ಸರಿಯಲ್ಲ ಪ್ರೆಸಿಡೆಂಟರ ಚುನಾವಣೆಯಲ್ಲಿ ಡಿ.ಎಂ.ಕೆ. ಪಕ್ಷದ ಓಟನ್ನು ಪಡೆಯಲು ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಇರಬೇಕು, ಆ ಉದ್ದೇಶದಿಂದ ಕರ್ನಾಟಕದ ರೈತರ ಹಿತವನ್ನು ಕಡೆಗಣಿಸಿ ಧಾರಾಕಾರವಾಗಿ ಮದ್ರಾಸಿಗೆ ಶ್ರೀ ಮಾನ್ ಚನಬಸಪ್ಪನವರು ಕನ್ನಂಬಾಡಿ ಕಟ್ಟೆಯಿಂದ ಬಿಡಿಸುತ್ತಿದ್ದಾರೆ. ಇದು ಅನ್ಯಾಯ, ಶೋಚನೀಯ. ಇದು ಅಧಿಕಾರದ ದುರುಪಯೋಗದ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು. ಕೇಂದ್ರದಿಂದ ಸೂಚನೆ ಬಂತೆಂದು ಇಲ್ಲಿನ ರೈತರ ಹಿತಕ್ಕೆ ವಿರೋಧವಾಗಿ ನೀರನ್ನು ಕೊಡುವುದು ಸರಿಯೇ ? ಕೊಡಲು ಯಾರ ಮನೆ ಗಂಟು ಇದು ? ಕಳೆದ ನಾಲ್ಕೈದು ವರ್ಷಗಳಿಂದ ಅನೇಕರು ತೊಂದರೆಪಟ್ಟರು, ಕೋಟ್ಯಾಂತರ ರೂಪಾಯಿಗಳಷ್ಟು ಹಣ ಹಾಳಾಯಿತು. ಈಗಲೂ ಅದಕ್ಕೆ ಅವಕಾಶಕೊಡುವುದು ಉಚಿತವಲ್ಲ. ಇದರ ಬಗ್ಗೆ ಪ್ರತಿಭಟಿಸಿ ಹೋರಾಡಬೇಕಾಗುತ್ತದೆ.

ಅಧ್ಯಕ್ಷರು.—ಇಲ್ಲಿ ಹೀಗೆ ಜಗಳ ಮಾಡುವುದು ಸರಿಯಲ್ಲ, ದಯಮಾಡಿ ಕುಳಿತುಕೊಳ್ಳಿ

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಮ್ಮ ರಾಜ್ಯದ ರೈತರ ಹಿತವನ್ನು ನಾವು ಎಂದೂ ಕಡೆಗಾಣಿಸಿಲ್ಲ. ಮಾನ್ಯ ಸದಸ್ಯರು ಆ ರೀತಿ ಭಾವನೆ ಮಾಡಿಕೊಂಡಿರುವುದು ಶುದ್ಧ ತಪ್ಪು, ಎರಡನೆಯದಾಗಿ, ಶ್ರೀಮಾನ್ ಫಕ್ರುದ್ದೀನ್ ಅಲಿ ಅಹಮದ್ ಅವರಿಗೆ ಡಿ.ಎಂ.ಕೆ. ಪಕ್ಷದವರ ಓಟು ಬಾರದಿದ್ದರೆ ಅವರೇನು ಸೋತು ಹೋಗುವುದಿಲ್ಲ. ಆ ಕಾರಣದಿಂದ ನೀರು ಬಿಟ್ಟುಕೊಟ್ಟಿದಾರೆ ಎಂಬ ಉಹಾಪೋಹ ಏನಿದೆ. ಇದಕ್ಕಿಂತಲೂ ಮಹಾಪರಾಧ ಬೇರೆ ಇಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಶಂಕೆ ಇದೆ

ಆದನ್ನು ಬಿಡಬೇಕು. ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ತರುವ ರೀತಿಯಲ್ಲಿ ಯಾರಿಗೂ ನೀರನ್ನು ದಯಾದಾಕ್ಷಿಣ್ಯಕ್ಕೋಸ್ಕರ ಕೊಡುತ್ತಾ ಇಲ್ಲ ಎಂದು ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೆಗೌಡ.—ಎಷ್ಟು ನೀರನ್ನು ಬಿಟ್ಟಿದ್ದೀರಿ.

SRI CHANNABASAPPA.—Just now it has been passed on to me. I have no objection to give the actual figures.

Re : Levy of Taxes in the State,

Statement by the Minister for finance

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಮ್ಮ ಒಪ್ಪಿಗೆಗಾಗಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಈ ಶಾಸನ ಸಭೆ ಪ್ರಾರಂಭವಾಗುವುದಕ್ಕಿಂತ ಮೊದಲು ಕೇಂದ್ರ ಸರ್ಕಾರ ದೇಶದಲ್ಲಿರತಕ್ಕ ಎಲ್ಲ ರಾಜ್ಯ ಸರ್ಕಾರಗಳಿಗೂ ಕೂಡ ಜಾಸ್ತಿ ತೆರಿಗೆಗಳನ್ನು ಜನತೆಯ ಮೇಲೆ ಹಾಕುವುದಕ್ಕೆ ಆದೇಶ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿತ್ತು. ಈ ವಿಷಯವನ್ನು ಆಂಧ್ರ ಪ್ರದೇಶದ ಶಾಸನ ಸಭೆಯಲ್ಲೂ ಕೂಡ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಬೇರೆ ರಾಜ್ಯಗಳ ಶಾಸನ ಸಭೆಗಳಲ್ಲೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜಾಸ್ಯಂಗದಲ್ಲಿರತಕ್ಕ ಹಕ್ಕುಗಳ ಪ್ರಕಾರ, ಸರ್ಕಾರ ಯಾವ ವಿಷಯಗಳ ಮೇಲೆ ತೆರಿಗೆ ಹಾಕಬಹುದು, ರಾಜ್ಯ ಸರ್ಕಾರ ಯಾವುದರ ಮೇಲೆ ತೆರಿಗೆಗಳನ್ನು ಹಾಕಬಹುದು ಎಂದು ಸ್ಪಷ್ಟವಾಗಿ ಇದೆ. ಈ ಸಂದರ್ಭದಲ್ಲಿ, ಕೇಂದ್ರ ಸರ್ಕಾರ, ಈ ರೀತಿ ಆದೇಶವನ್ನು ರಾಜ್ಯ ಸರ್ಕಾರಗಳಿಗೆ ಕಳುಹಿಸಿರುವುದರಿಂದ, ಯಾವ ಪರಿಸ್ಥಿತಿ ಬರುತ್ತದೆ ಎಂದರೆ our State Government is almost reduced to the status of a municipality. ಕೇಂದ್ರ ಸರ್ಕಾರದವರು, ಟ್ಯಾಕ್ಸ್ ಹಾಕಿ ಎಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹೇಳಿದರೆ, ಹಾಕಬೇಕು, ಬೇಡ ಎಂದರೆ ಬಿಡಬೇಕು. ಈ ದೃಷ್ಟಿಯಿಂದ ಇದು ಸಣ್ಣ ವಿಷಯವಲ್ಲ ಏಕೆಂದರೆ, ಇದು ನಮ್ಮ ರಾಜ್ಯ ಸರ್ಕಾರಕ್ಕೆ ಇರತಕ್ಕ ಹಕ್ಕನ್ನು ಕಿತ್ತು ಹಾಕತಕ್ಕ ಪ್ರಶ್ನೆ. ಕೇಂದ್ರ ಸರ್ಕಾರದವರಿಗೆ ಎಷ್ಟು ಅಧಿಕಾರ ಇದೆಯೋ ಅಷ್ಟು ಮಾತ್ರ ಪ್ರಯೋಗ ಮಾಡಬೇಕು. ಅದನ್ನು ಮೀರಿ ಹೋಗುವುದಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಕೇಂದ್ರ ಸರ್ಕಾರದವರಿಂದ ಈ ರೀತಿ ರಾಜ್ಯಸರ್ಕಾರಗಳಿಗೆ ಆದೇಶ ಬಂದಿದೆಯೋ ? ಹಾಗೆ ಬಂದಿದ್ದರೆ, ರಾಜ್ಯ ಸರ್ಕಾರದವರು ಅದಕ್ಕೆ ಏನು ಉತ್ತರವನ್ನು ಕೊಟ್ಟಿದ್ದಾರೆ ಒಂದು ವೇಳೆ ತೆರಿಗೆ ಹಾಕುವ ಹಾಗಿದ್ದರೆ, ಎಷ್ಟು ಹೆಚ್ಚಿಗೆ ಹಾಕುತ್ತೀರಿ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು.

†ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ತಮಗೆ ಗೊತ್ತಿರುವಂತೆ, ಕೇಂದ್ರ ಸರಕಾರದವರು ಕಾನ್‌ಸ್ಟಿಟ್ಯೂಷನ್ ಪ್ರಕಾರ ಯಾವ ರಾಜ್ಯ ಸರಕಾರಗಳಿಗೂ ಈ ರೀತಿ ಟ್ಯಾಕ್ಸೇಷನ್ ಸಂಬಂಧದಲ್ಲಿ ಆದೇಶ ಕೊಡುವ ಹಾಗಿಲ್ಲ. ಅಂತಹ ಆದೇಶವನ್ನು ಕೇಂದ್ರ ಸರಕಾರದವರು ರಾಜ್ಯ ಸರಕಾರಗಳಿಗೆ ಕೊಟ್ಟಿಲ್ಲ. ಈಗ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಎಲ್ಲೆಲ್ಲಿ ಉಳಿತಾಯ ಮಾಡಲಿಕ್ಕೆ ಸಾಧ್ಯ, ಎಲ್ಲೆಲ್ಲಿ ಆದಾಯ ಹೆಚ್ಚಿಸಲಿಕ್ಕೆ ಸಾಧ್ಯ, ಅದರ ಬಗ್ಗೆ ಕೇಂದ್ರ ಸರಕಾರದವರು ಚರ್ಚೆ ಮಾಡಿದರೆ ಅಥವಾ ಸೂಚನೆಗಳನ್ನು ಕೊಟ್ಟರೆ ಅದು ತಪ್ಪೇನೂ ಇಲ್ಲ, ಅಥವಾ ಅದರಿಂದ ನಮ್ಮ ಮೇಲೆ ಅಧಿಕಾರ ಉಪಯೋಗಿಸಿದಂತಾಗುವುದಿಲ್ಲ. ಪ್ಲಾನಿಂಗ್ ಕಮಿಷನ್ನಿನವರು ಮತ್ತು ಕೇಂದ್ರ ಸರಕಾರದವರು ಈಗಿನ ಪರಿಸ್ಥಿತಿಯಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರಾಜ್ಯಗಳ ಆದಾಯವನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆ ನಡೆಸಿದ್ದಾರೆ. ಅದೇ ರೀತಿ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಅಲ್ಲಿಗೆ ಹೋದಾಗ ಕೆಲವು ಸೂಚನೆಗಳನ್ನು ಮಾಡಿದ್ದಾರೆ ಹೀಗೆ ಸೂಚನೆಗಳನ್ನು ಮಾಡಿದಾಗ ನಮ್ಮ ಮುಖ್ಯ ಮಂತ್ರಿಯವರು ಅವರಿಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ : ಕರ್ನಾಟಕ ರಾಜ್ಯದಲ್ಲಿ ನಾವು ಏನೇನು ಮಾಡಿದ್ದೇವೆ ಎಂದು. ನಾನ್-ಪ್ಲಾನಿಂಗ್‌ನಲ್ಲಿ ೧೫ ಕೋಟಿ ರೂಪಾಯಿಗಳನ್ನು ಕಟ್ ಮಾಡಿದ್ದೇವೆ ಮತ್ತು ೨೧ ಕೋಟಿ ರೂಪಾಯಿಗಳ ಹೊಸ ಆದಾಯ ಬರುವ ರೀತಿಯಲ್ಲಿ ಧೈರ್ಯವಾಗಿ ತೆರಿಗೆಯನ್ನು ಹಾಕಿದ್ದೇವೆ, ಇದರಿಂದ ನಾವು ಏನೇನು ಮಾಡಲಿಕ್ಕೆ ಸಾಧ್ಯವೋ, ಅದನ್ನೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ನಮ್ಮ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ, ಈ ರೀತಿ ಚರ್ಚೆ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಪುನಃ ನಾನು ಸರಕಾರದ ವತಿಯಿಂದ ಹೇಳಬೇಕಾದರೆ, ತೆರಿಗೆ ಹಾಕುವ ನೀತಿ